ರಾಮಸಾಗರ ಕೆರೆಯ ಅಂಗಳವನ್ನು ಜಮೀನುದಾರರು ಒತ್ತುವರಿ ಮಾಡಿರುವುದು.

1027. ಶ್ರೀ ಎಮ್. ಭಕ್ತವತ್ಸಲಂ (ಕೆ.ಜಿ.ಎಫ್) :– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಮಸಾಗರ ಕೆರೆಯ ಅಂಗಳವನ್ನು ಜಮೀನುದಾರರು ಒತ್ತುವರಿ ಮಾಡಿರುವುದನ್ನು ಸರ್ಕಾರವು ಗಮನಿಸಿದೆಯೆ ;

ಆ) ಹಾಗಿದ್ದಲ್ಲಿ, ಒತ್ತುವರಿ ಮಾಡಿರುವವರ ಪಟ್ಟಿ ಮತ್ತು ಒತ್ತುವರಿಯ ಪ್ರಮಾಣದ ವಿವರಗಳನ್ನು ಒದಗಿಸುವುದು ;

ಇ) ಈ ಒತ್ತುವರಿಯನ್ನು ತೆರವು ಮಾಡಿಸುವ ಯಾವುದಾದರೂ ಯೋಜನೆ ಸರ್ಕಾರದ ಮುಂದಿದೆಯೇ ;

ಈ) ಹಾಗಿದ್ದಲ್ಲಿ, ಯಾವಾಗ ;

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) –

ಅ) ಹೌದು.

ಆ) ಒಟ್ಟು 19 ಜನ , 51 ಎಕರೆ 34 ಗುಂಟೆ ಕೆರೆ ಅಂಗಳದ ಪ್ರದೇಶವನ್ನು ಒತ್ತುವರಿ ಮಾಡಿದ್ದಾರೆ (ವಿವರಗಳನ್ನು ಅನುಬಂಧ ದಲ್ಲಿ ಒದಗಿಸಲಾಗಿದೆ).

ಇ) ಇದೆ

ಈ) 11 ಜನರು ಒತ್ತುವರಿ ಮಾಡಿರುವ 22 ಎಕರೆ 26 ಗುಂಟೆ ಜಮೀನನ್ನು ಈಗಾಗಲೇ ತೆರವು ಮಾಡಿಸಲಾಗಿದ್ದು ಉಳಿದವರನ್ನು ಸಹ ಶೀಘ್ರವಾಗಿ ತೆರವು ಮಾಡಿಸಲಾಗುವುದು.

ANNEXURE

LIST OF ENCROACHMENTS OF RAMASAGARA TANK BED IN BANGARPET TALUK

Sl. No.	Name of Person	Extent A – G	
1.	Venkatarama Reddy	0–10	Encroachment evicted.
2.	Munireddy	2–00	
3.	Jayaramareddy, Gangireddy, Chickarangappaa	1–08	
4.	Gurappa	0–15	
5.	Munireddy Gurrappa	1–28	
6.	Munivenkatappa, Krishnappa Naidu Ramakrishna Naidu, Chinnaswamy	9–00	
7.	Hanumappa	3–00	
8.	R. Venkatesh Naidu, K.T. Venkatesh Naidu	1–20	
9.	Srinivasa Naidu	0–28	
10.	R. Venkatesh Naidu	2–15	
11.	K. Venkatappa Naidu	0–22	

Sl. No.	Name of Person	Extent	
12.	K. Ramachandra Naidu K. Venkatappa Naidu	3–00	Encroach–ment to be evicted
13.	R. Venkatesh Naidu etc.	5–00	
14.	K. Ramachandra Naidu	3–00	
15.	Lakshmaiah Naidu, Muniswamy Naidu	2–00	
16.	Srinivasa Naidu Abbaiah	4–32	
17.	Venkatappa, Bachanna, Munirathnam Doraiswamy Naidu	5–00	
18.	Rangaswamy Naidu	3–00	
19.	K.M. Doraiswamy Naidu, Krishnappa Naidu, Venkatappa Naidu	3–16	
	Total	51–34	

Title deed has been granted for Sl. No.19 by Revenue Authorities.

ಹಾಸನ ಜಿಲ್ಲೆಯ. ಯಗಚಿ ಯೋಜನೆ ಬಗ್ಗೆ.

1123. ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :– ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ–

ಅ) 1991–92ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ಯಗಚಿ ಯೋಜನೆಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿರುವುದು;

ಆ) ಇದರಲ್ಲಿ ಇದುವರೆವಿಗೂ ಎಷ್ಟು ಹಣ ಖರ್ಚು ಆಗಿದೆ? ವಿವರ ಕೊಡಿ ;

ಇ) ಖರ್ಚಾಗಿರುವ ಹಣದಲ್ಲಿ ಎಷ್ಟು ಮೊಬಲಗಿನ ಕೆಲಸವನ್ನು ಟೆಂಡರ್ ಮುಖಾಂತರ ಮಾಡಲಾಗಿದೆ ;

ಈ) ಎಷ್ಟು ಮೊತ್ತದ ಕೆಲಸವನ್ನು ಎನ್.ಎಂ.ಆರ್. ಮುಖಾಂತರ ಮಾಡಲಾಗಿದೆ (ವಿವರ ಕೊಡುವುದು) ;

ಉ) ಎಷ್ಟು ಮೊಬಲಗಿನ ಕೆಲಸವನ್ನು ಪೀಸ್ ವರ್ಕ್ ಮುಖಾಂತರ ಮಾಡಲಾಗಿದೆ? ವಿವರ ಕೊಡುವುದು ;

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) –

ಅ) 1991–92ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಯಗಚಿ ಯೋಜನೆಗೆ ಸರ್ಕಾರದಿಂದ ರೂ.6.00 ಕೋಟಿ ಅನುದಾನ ಒದಗಿಸಲಾಗಿದೆ.

ಆ) ಯಗಚಿ ಯೋಜನೆಗೆ 91–92ನೇ ಸಾಲಿನಲ್ಲಿ ಜನವರಿ 92ರವರೆಗೆ ರೂ. 4.02 ಕೋಟಿ ಖರ್ಚು ಆಗಿರುತ್ತದೆ. ಇದರಲ್ಲಿ ಕಾಮಗಾರಿ ಕೆಲಸಗಳಿಗಾಗಿ ರೂ.1.96 ಕೋಟಿ ಖರ್ಚು ಆಗಿರುತ್ತದೆ. ಉಳಿದ ಹಣ ರೂ.2.06 ಕೋಟಿ ಭೂ ಸ್ವಾಧೀನ, ಸಿಬ್ಬಂದಿ ವೇಚ್ಛ ಹಾಗೂ ಯಂತ್ರೋಪಕರಣ ಮತ್ತು ಇತ್ಯಾದಿಗಳಿಗೆ ಖರ್ಚಾಗಿರುತ್ತದೆ.

ಇ) ಯಗಚಿ ಯೋಜನೆಯಲ್ಲಿ ಟೆಂಡರ್ ಕೆಲಸಗಳಿಗೆ 80.64 ಲಕ್ಷ ರೂಪಾಯಿಗಳು ಖರ್ಚು ಆಗಿರುತ್ತದೆ.

ಈ) ಇಲಾಖೆ ವತಿಯಿಂದ ಕೆಲಸ ಮಾಡುವುದಕ್ಕೆ (ಎನ್.ಎಂ.ಆರ್.ನಲ್ಲಿ) ರೂ.30.78 ಲಕ್ಷ ರೂ. ಕೊಡಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ).